ಮೂಲ ದಾವಾ ಸಂಖ್ಯೆ 45/2016 ಪಿ ಡಬ್ಲ್ಯೂ 2

(ದಿನಾಂಕ 18-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ನಾನು ಮತ್ತು ವಾದಿ ಹಾಗೂ ವಾದಿ ಪರ ಇತರೆ ಸಾಕ್ಷಿದಾರರು ಒಂದೇ ಗ್ರಾಮದವರು ಎಂದರೆ ಸರಿ. ನಿಮ್ಮ ಮತ್ತು ವಾದಿಯ ನಡುವೆ ಒಳ್ಳೆಯ ಸಂಬಂಧ ಇದೆ ಎಂದರೆ ಸಾಕ್ಷಿಯು ನಾನು ಮತ್ತು ಅವರು ಕುಲಸ್ಥರು ಎನ್ನುತ್ತಾರೆ. ಈ ದಾವೆಯನ್ನು ಯಾರು ಯಾರ ವಿರುದ್ಧ ದಾಖಲಿಸಿದ್ದಾರೆನ್ನುವುದು ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಜಮೀನು ಬಾಸ್ಗಿದೇರಿ ಗ್ರಾಮಕ್ಕೆ ಸೇರಿರಬಹುದು. ದಾವಾಸ್ತಿ ಮೂಲತಃ ಯಾರದ್ದು ಎನ್ನುವುದು ನನಗೆ ಗೊತ್ತಿಲ್ಲ. ದಾವಾಸ್ತಿ ವಾದಿಗೆ ಹೇಗೆ ಬಂತು ಎನ್ನುವುದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ವಾಮಣ್ಣನ ಕಡೆಯಿಂದ ಅವರಿಗೆ ಬಂತು ಎನ್ನುವುದು ನನಗೆ ಗೊತ್ತು ಎನ್ನುತ್ತಾರೆ. ಸದರಿ ಜಮೀನಿನ ಪಹಣಿಗಳು ವಾಮಣ್ಣನ ಹೆಸರಿಗೆ ಅಥವಾ ವಾದಿಯ ಹೆಸರಿಗೆ ಬಂದಿರುತ್ತಾವಾ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ದಾವಾಸ್ತಿ ಮೂಲತಃ ಒಟ್ಟು ಎಷ್ಟು ಎಕರೆ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ವಾದಿಯು ದಾವಾ ಜಮೀನು ಖರೀದಿಸಿದ ದಿನಾಂಕ, ತಿಂಗಳು ಮತ್ತು ವರ್ಷ ಯಾವುದು ಅಂತಾ ಹೇಳಲು ಬರುವುದಿಲ್ಲ. ಸದರಿ ಕ್ರಯಪತ್ರಕ್ಕೆ ಯಾರು ಸಾಕ್ಷಿ ಮಾಡಿದ್ದಾರೆ ಮತ್ತು ಬಿಕ್ಕಲಂದಾರರು ಯಾರು ಇರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ವಾದಿಯು ಕರೆದಿರುತ್ತಾರೆ. ದಾವಾಸ್ತಿಗೆ ಸಂಬಂದಿಸಿದಂತೆ ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವಾ ಸರ್ವೆ ನಂಬರ್ ಮೂಲತಃ 13.44 ಸೆಂಟ್ಸ ಇರುತ್ತದೆಂದರೆಸರಿ. ಸದರಿ ಆಸ್ತಿಯು ಮೂಲತಃ ಬೆಳಗಿ ಚನ್ನಬಸಮ್ಮ ಇವರ ಹೆಸರಿನಲ್ಲಿ ಸನ್ 1968 ರಿಂದ ದಾಖಲಿರುತ್ತದೆಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಗೆ ಪ್ರತಿವಾದಿ ಸಂಪೂರ್ಣ ಮಾಲೀಕ ಮತ್ತು ಸ್ವಾಧೀನದಾರರು ಇರುತ್ತಾರೆಂದರೆ ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯರು ನೋಡಿರುವುದಿಲ್ಲ. ದಾವಾಸ್ತಿಯು ಪ್ರತಿವಾದಿಗೆ ಅವರ ವಂಶಸ್ಥರಿಂದ ಪಿತ್ರಾರ್ಜಿತವಾಗಿ ಬಂದಿರುತ್ತದೆಂದರೆ ಸರಿ. ದಾವಾಸ್ತಿಯಲ್ಲಿ ಪ್ರತಿವಾದಿ ಮತ್ತು ಅವರ ವಂಶಸ್ಥರು ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿಯು ವಾದಿಯು ಸ್ವಾಧೀನದಲ್ಲಿರುತ್ತಾರೆನ್ನುತ್ತಾರೆ. ವಾದಿಯು ದಾವಾಸ್ತಿಯಲ್ಲಿ ಎಂದೂ ಸ್ವಾಧೀನದಲ್ಲಿರುವುದಿಲ್ಲ ಪ್ರತಿವಾದಿಯೇ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿಯು ನಾನು ಎಂದೂ ಅವರನ್ನು ನೋಡಿರುವುದಿಲ್ಲವೆನ್ನುತ್ತಾರೆ. ದಾವಾಸ್ತಿಯ ಚಕ್ಕುಬಂದಿ

ಮೂಲ ದಾವಾ ಸಂಖ್ಯೆ 45/2016 ಪಿ ಡಬ್ಲ್ಯೂ 2

ಪೂಃ ಹೆಗ್ಗಪ್ಪನವರ ನಾಗಪ್ಪ ಇವರ ಸ್ವತ್ತು, ಪಃ ಹರಿಜನ ಇವರ ಸ್ವತ್ತು ಇರಬಹುದು, ಉಃ ಹನುಮಂತಪ್ಪನವರ ಸ್ವತ್ತು ಹಾಗೂ ದಃ ಪ್ರತಿವಾದಿ ಇವರ ಸ್ವತ್ತು ಇರುತ್ತದೆ. ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ